ಆಡತೊಡಗಿದ್ದು; ಅದೂ ಈ ಅಪರಿಚಿತ ನೆಲದಲ್ಲಿ, ಒಂದು ಆತಂಕ ಹುಟ್ಟಿಸಿ ಅವರ ಮುಖವನ್ನೇ ದಿಟ್ಟಿಸಿದರು. 'ಬೀಪಿ ಮಾತ್ರೆ ಬೆಳಿಗ್ಗೆ ತಗೊಂಡ್ರಿ ಅಲ್ವ?... ವಿಚಾರಿಸಿದಳು. 'ಥೋ! ಬರೀ ಯಡವಟ್ಟು ಆಲೋಚ್ನೇನೆ ನೋಡು ನಿಂದು. ನಾ ಸರೀ ಇದ್ದೇನೆಯೇ. ಚಿಂತಿಸ್ಬೇಡ. ಎಷ್ಟು ಚಂದ ಇದೆ ಇದೆಲ್ಲಾ ನೋಡು ಬಾ' ಅನ್ನುತ್ತಾ ಕಬ್ಬಿನ ಗಾಣದ ಹತ್ತಿರ ಹೋಗಿ ನಿಂತರು. ಬೆಳ್ಳಗಿನ ಮರದಲ್ಲಿ ಮಾಡಿದ ಎರಡು ದಿಂಡುಗಳು ಮೇಲಿಂದ ಕೆಳಮುಖವಾಗಿ ಕೊರೆದ ಹಲ್ಲುಗಳ ಮೂಲಕ ಕೂಡಿಕೊಂಡಿದ್ದವು. ಒಂಟಿ ಎತ್ತು ಸುತ್ತಿಬಂದಂತೆ ದಿಂಡುಗಳು ಚಲಿಸಿ ಮಧ್ಯೆ ಕೊಟ್ಟ ಕಬ್ಬನ್ನು ಅಪ್ಪಚ್ಚಿಮಾಡಿ ಹಾಕುತ್ತಿದ್ದವು. ಹಸಿರು ಮಿಶ್ರಿತ ಹಳದಿ ರಸ ಕೆಳಗೆ ನೊರೆನೊರೆಯಾಗಿ ಸುರಿಯುತ್ತಿತ್ತು. ರಸ್ತೆಯುದ್ದಕ್ಕೂ ಅಲ್ಲಿಲ್ಲಿ ಹಾಕಿದ ಇಂತದೆ ಚಪ್ಪರಗಳು ಕಾಣುತ್ತಿದ್ದವು. ಸುತ್ತೆಲ್ಲ ಗದ್ದೆಬಯಲು. ಅಲ್ಲಲ್ಲಿ ನಿಂತ ಯಾವುದೋ ಕಾಲದಲ್ಲಿ ಹಾಕಿದ ಬೇವಿನ ಮರಗಳು. ಚಪ್ಪರದಲ್ಲಿ ಬಣ್ಣದ ತೂಗುಮಂಚಗಳನ್ನು ಜೋಕಾಲಿಯಾಗಿ ಕಟ್ಟಿದ್ದರು. ಎತ್ತಿನಗಾಡಿಗಳಲ್ಲಿ ಬರುವ ಹಳ್ಳಿಗರು, ವಾಹನಗಳಲ್ಲಿ ಬರುವ ಪ್ರವಾಸಿಗರು, ಹೆಂಗಸರು ಮಕ್ಕಳಾದಿಯಾಗಿ ಅದರಲ್ಲಿ ತೂಗಿಕೊಂಡು ಖುಷಿಪಡುತ್ತಿದ್ದರು. ರಾಮಣ್ಣ ಒಂದು ತೂಗುಮಂಚದಲ್ಲಿ ಕುಳಿತು ಹೆಂಡತಿಗೆ ಒತ್ತಾಯಮಾಡಿದರು. ಐಸ್ ಹಾಕದೆ ದೊಡ್ಡ ಗ್ಲಾಸಿನ ತುಂಬ ಎರಸಿಕೊಟ್ಟ ಎಲೆಹಸಿರು ಬಣ್ಣದ ರಸವನ್ನು ಆಸ್ವಾದಿಸಿ ಕುಡಿಯುತ್ತ ಗೌರಕ್ಕನ ಮುಜುಗರವನ್ನು ಲೆಕ್ಕಿಸದೇ ತೂಗಿಕೊಳ್ಳತೊಡಗಿದರು. ಮತ್ತೊಂದು ಗ್ಲಾಸು ಕಬ್ಬಿನಹಾಲು ಕೊಡಲು ಹೇಳುವಾಗ ಮಂಚದಿಂದ ಕೆಳಗಿಳಿದು ಬಚಾವಾದ ಭಾವದಲ್ಲಿ ಕುರ್ಚಿಯ ಮೇಲೆ ಆಸೀನಳಾದ ಹೆಂಡತಿಯನ್ನು ಕನಿಕರದಿಂದ ನೋಡಿ ಅಂಗೈಯಲ್ಲೇ ಇದ್ರೂ ಅನುಭವಿಸೋ ಭಾಗ್ಯ ಬೇಕು ನೋಡು ಅಂತ ಗೊಣಗಿಕೊಂಡು ತಮ್ಮಷ್ಟಕ್ಕೆ ತಾವು ತೂಗಿಕೊಳ್ಳತೊಡಗಿದರು. ಅಲ್ಲಲ್ಲಿ ಕಬ್ಬಿನಗದ್ದೆಗಳು. ರಸ್ತೆಯಲ್ಲಿ ಆಗಾಗ ಕಾಣುವ ಬಿರಿದು ಬೀಳುವಂತೆ ಕಬ್ಬು ತುಂಬಿಕೊಂಡು ಕಷ್ಟದಿಂದ ಅಂಬೆಹರಿದು ಹೋಗುವ ಒಂಟಿ, ಜೋಡಿ ಟ್ರಾಕ್ಟರುಗಳು. ದಾಳಿಂಬೆ ಹಣ್ಣುಗಳನ್ನು ಎರಡು, ಐದು ಕಿಲೋ ಲೆಕ್ಕದಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಚೌಕಾಸಿಯಲ್ಲಿ ಮಾರುವ ಹುಡುಗರು, ಹೆಂಗಸರು. ಒಂದು ತರಾ ನಿರುಂಬಳ ತರುವ ಬೆಚ್ಚಗೆ ಸುಳಿಯುವ ಗಾಳಿ. ಟೆಂಪೊದವರು ಗಡಿಬಿಡಿ ಮಾಡದಿದ್ದರೆ ಅಲ್ಲಿಂದ ಏಳುವ ಮನಸೇ ಇರಲಿಲ್ಲ. ಹೊರಡುವಾಗ ತಮ್ಮ ಕ್ಯಾಮರಾದಲ್ಲಿ ರಸ ಸುರಿಸುವ ಮರದ ಗಾಣ, ತೂಗುವ ಜೋಕಾಲಿಗಳ ಎರಡುಮೂರು ಫೋಟೊ ತೆಗೆದುಕೊಂಡರು. ಶಿರಡಿಯಲ್ಲಿ ಊಟ ಮುಗಿಸಿದ ಮೇಲೆ ಹೋಟೆಲಿನವರು ಟೆಂಪೋದಲ್ಲಿ ಕೋಪರಗಾಂವ ಸ್ಟೇಶನ್ನಿಗೆ ತಂದು ಬಿಟ್ಟರು. ಪ್ಲಾಟ್‌ಫಾರಂ ಮೇಲೂ ಒಂದುಕಡೆ ಕುಳಿತಿರದೆ ಚುರುಕಾಗಿ ಅತ್ತಿತ್ತ ಸುತ್ತಾಡಿದರು. ಭುಸಾವಳದಲ್ಲಿ ಕೆಳಗಿಳಿದು ವಾಪಸು ಬಂದವರ ಎರಡೂ ಅಂಗೈ ತುಂಬಿಕೊಂಡಿತ್ತು. 'ವಡಾಪಾವ್ ಬಿಸಿಬಿಸಿಯಿದೆ, ತಿನ್ನು' ಅನ್ನುತ್ತ ಒಂದನ್ನು ಗೌರಕ್ಕನಿಗೆ ಕೊಟ್ಟರು. 'ಈ ಪ್ರವಾಸಕ್ಕೆ ಬಂದು ಒಳ್ಳೇದು ಮಾಡಿದೆವು ನೋಡು' ಅನ್ನುತ್ತಾ ಚಪ್ಪರಿಸುತಿದ್ದವರನ್ನು ಕಂಡು, ಒಳ್ಳೇ ಕಥೆ! ಎಲ್ಲಾದರು ಹೋಗಿಬರೋಣ ಅಂತ ಇನ್ನಿಲ್ಲದಂತೆ ಕಾಡಿ ಎಬ್ಬಿಸಿದ್ದು ತಾನು; ಇಲ್ಲಿ ನೋಡಿದರೆ ತಾವೇ ಕರೆದು ತಂದಂತೆ ಆಡುವ ಗಂಡ ಬೇರೆಯದೆ ವ್ಯಕ್ತಿಯಾ ಅನ್ನುವ ಭ್ರಮೆಯಾಯಿತು.

ಊರು ಸೇರಿದ ಮರುದಿನ ನಸುಕಿಗೇ ಎದ್ದು ಹೋದವರು ಬಂದದ್ದು ಗೌರಕ್ಕ ಕಾದು ಸಾಕಾಗಿ ಇನ್ನೇನು ಹುಡುಕಲು ಹೊರಡಬೇಕು ಅನ್ನುವ ಆತಂಕವಾಗುವಷ್ಟು ಹೊತ್ತಾಗಿ. 'ಕಬ್ಬು ಈ ಸಾರಿ ಪಸಂದಾಗಿದೆ. ಇನ್ನೊಂದು ಹದಿನೈದು ದಿನಕ್ಕೆ ಕಡಿದ್ರೆ ಸಮಾ ಆಗತದೆ...' ಅಂದರು. 'ಅಷ್ಟು